ಹಿಂದಿನ ವಾರ ಅವರಿಬ್ಬರೂ ಸಿನಿಮಾಗೆ ಹೋಗಿದ್ದರು. ಸಲೀಮ್ ಒಂದು ಗಂಟೆ ಮುಂಚಿತವಾಗಿ ಥಿಯೇಟರ್‌ಗೆ ಬಂದಿದ್ದ. ಅಷ್ಟೇನು ಯಶಸ್ವಿಯಾಗಿರದ ಇಂಗ್ಲಿಷ್ ಸಿನಿಮಾ. ಸಿನಿಮಾ ಪ್ರಾರಂಭವಾದರೂ ಮನೋರಮ ಬರಲಿಲ್ಲ. ಸಿನಿಮಾದಲ್ಲಿ ಜೋರಾಗಿ ಕೂಗುತ್ತಿರುವ, ಹೊಡೆದಾಟದ ದೃಶ್ಯಗಳು, ಗಾಢ ಚುಂಬನದ ಸದ್ದು. ಹಸಿರು ಬಣ್ಣದ ಜರ್ಕಿನ್ ಹಾಕಿಕೊಂಡು ಮರ್ಲಿನ್ ಮನ್ರೋಳಂತೆ ಆಟೋದಿಂದ ಕೆಳಗಿಳಿದು ಚಿತ್ರಮಂದಿರ ಹೊಕ್ಕಳು. ಸೀಟಿನಲ್ಲಿ ಕುಳಿತ ನಂತರ ನಿಧಾನವಾಗಿ ಸಿನಿಮಾ ಲೋಕದೊಳಕ್ಕೆ ಲೀನವಾದಳು. ಸಲೀಮ್ ಆಕೆಯ ಕಿವಿಯ ಹತ್ತಿರ ಸಣ್ಣ ದನಿಯಲ್ಲಿ ಪಿಸುಗುಡತೊಡಗಿದ. “ಮೂವಿ ಇಂಟರೆಸ್ಟಿಂಗ್ ಆಗಿದೆ” ಎಂದಳು ಬೇಸರದಿಂದ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೇ, ನಿಧಾನವಾಗಿ ಆಕೆಯ ಭುಜದ ಸುತ್ತಲೂ ಕೈಹಾಕಿದ.

★★★

ಕ್ಯಾಂಟೀನ್ ಮುಂದಿನ ರಸ್ತೆಯ ಮೇಲಿನ ಎಲೆಗಳನ್ನು ಯಾರೋ ತುಳಿಯುತ್ತಾ ನಡೆದೆಂತೆನಿಸಿ ಮನೋರಮ ಇರಬಹುದೆಂದುಕೊಂಡ ಸಲೀಮ್. ಅಲ್ಲ ಯಾರೋ ಹುಡುಗ. ಪರಿಚಿತ ಮುಖ. ಮುಖದ ಮೇಲೆ ಮಳೆ ಹನಿಗಳನ್ನು ಒರೆಸಿಕೊಂಡು, ಟೀ ಕಪ್ ಕೈಹಿಡಿದು ಎದುರಿಗೆ ಬಂದು “ಹಲೋ” ಎಂದ. ಆ ಹುಡುಗ ಯುನಿವರ್ಸಿಟಿಯಲ್ಲಿ ರಿಸರ್ಚ್ ಮಾಡುತ್ತಿದ್ದ. ಪಿ.ಎಸ್. ಎಂಬ ಹೆಸರಿಂದ ಕವಿತೆ ಬರೆಯುತ್ತಾನೆ.

ಸಾಯಂಕಾಲ ಐದು ಗಂಟೆಯಾಗುತ್ತಿತ್ತು. ಮಸುಕಾಗಿ ಮಬ್ಬು ಕವಿಯುತ್ತಿತ್ತು. ಕ್ಯಾಂಟೀನ್ ಕೊನೆಯಲ್ಲಿನ ಕಿಟಕಿಗೆ ಒರಗಿಕೊಂಡು ಕ್ಯಾಂಟೀನ ವರ್ಕರ್‌ನೊಬ್ಬ ಬೀಡಿ ಸೇದುತ್ತಿದ್ದ. ಗಟ್ಟಿಯಾಗಿ ದಮ್ ಎಳೆದಾಗ ಅವನ ಮುಖ ಕೆಂಡದಂತೆ ಹೊಳೆಯುತ್ತಿತ್ತು.

“ಬೋರ್ ಅನಿಸುತ್ತಲ್ವಾ?” ಎಂದ ಪಿ.ಎಸ್. ಸಲೀಮನನ್ನು ಕುರಿತು. “ಈ ವಾತಾವರಣವೇ ಹೀಗೆ. ಏಕಾಂತದ ಮೇಲೆ ಬರೆದ ದೀರ್ಘ ಕವಿತೆಯಂತೆ” ಎಂದ ಕ್ಷಣ ಹೊತ್ತು ನಿಂತು. “ಯಾರಿಗಾದರೂ ಕಾಯ್ತಾ ಇದ್ದೀರಾ?” ಎಂದ ಪಿ.ಎಸ್. ಸ್ವಲ್ಪ ಹೊತ್ತು ನಿಂತು, “ಗರ್ಲ್ ಫ್ರೆಂಡಾ?” ಎಂದ ಹೊಗೆಯನ್ನು ಸಲೀಮ್ ಮುಖಕ್ಕೆ ಬಿಡುತ್ತಾ. “ಮಳೆ ಹನಿಗಳು, ಬೆಚ್ಚನೆ ಚಹಾ, ಪಕ್ಕದಲ್ಲಿ ಮನೋರಮ ಇದ್ದರೆ ಚೆನ್ನಾಗಿರುತ್ತಲ್ಲ” ಬೆಚ್ಚಿಬಿದ್ದ ಸಲೀಮ್. ಪಿ.ಎಸ್. ಬಗ್ಗೆ ತಲೆಕೆಡಿಸಿಕೊಳ್ಳದೇ, ಗಂಭೀರವಾಗಿ ನಿಂತಿದ್ದ ಮರಗಳ ಕಡೆಗೆ ದೃಷ್ಟಿನೆಟ್ಟ. ಸಣ್ಣಗೆ ತೆರೆಯಂತೆ ಮಳೆ ನಾಲ್ಕು ದಿಕ್ಕುಗಳಿಂದ ಆವರಿಸತೊಡಗಿತು.

★★★

ಸಿನಿಮಾ ಥಿಯೇಟರ್‌ನಲ್ಲಿ ಮನೋರಮಳ ಭುಜದ ಮೇಲೆ ಒರಗಿ, ಬೆಚ್ಚನೆ ಆಕೆಯ ಉಸಿರು ಕಿವಿಗೆ ಬಡಿಯುತ್ತಿರುವಾಗ, ಅದ್ಭುತವಾದ ಅನುಭವ ಅದು. ಮೃದುವಾದ ಸ್ಪರ್ಶ, ಬೆಚ್ಚನೆ ಉಸಿರು ಆ ಅನುಭವ ಅವನ ಎದೆಯಲ್ಲಿ ಗಾಢವಾಗಿ ದಾಖಲಾಗಿತ್ತು. ಆ ಇಡೀ ಸಂಜೆ ಪರಿಮಳದಲ್ಲಿ ಅದ್ದಿದಂತಿತ್ತು. ಆ ಸ್ಪರ್ಶದ ಅನುಭೂತಿ ಅವನನ್ನು ಬೆನ್ನು ಹತ್ತಿತ್ತು.

ನಿಧಾನವಾಗಿ ನಾಲ್ಕೈದು ಜನ ಹುಡುಗರು ಸೇರಿದರು. ಸಲೀಮ್ ಸುತ್ತಲೂ ವೃತ್ತಾಕಾರದಲ್ಲಿ ಕುರ್ಚಿಗಳನ್ನು ಹಾಕಿಕೊಂಡು ಕುಳಿತರು. ಮುತ್ತಿಗೆ ಹಾಕಿದವರಂತೆ ಭಾಸವಾಗತೊಡಗಿತು. ‘ಮನೋರಮ...’ ಅವರ ಕಿವಿಗಳಲ್ಲಿ ಪಿಸುಗುಟ್ಟಿದ ಪಿ.ಎಸ್. ವಿಚಿತ್ರವಾದ ಆತಂಕವೊಂದು ಸಲೀಮನನ್ನು ಆವರಿಸತೊಡಗಿತು. ಎದ್ದು ನಾಲ್ಕು ಹೆಜ್ಜೆ ಹಾಕಿದ. ಬೇಸರದಿಂದ ರಸ್ತೆಯ ಕಡೆ ನೋಡುತ್ತಾ, ಇಷ್ಟು ಹೊತ್ತಾದರೂ ಬಾರದ ಮನೋರಮಳನ್ನು